# ಸ್ವಾಮಿ ಗಂಭೀರಾನಂದ (೧೮೯೯-೧೯೮೮)

## (ರಾಮಕೃಷ್ಣ ಮಹಾಸಂಘದ ೧೧ನೇ ಪರಮಾಧ್ಯಕ್ಷರು)

ಮೂಲ ಬಂಗಾಳಿ: **ಸ್ವಾಮಿ ಚೇತನಾನಂದ**

ಅನುವಾದ: **ಕುಮಾರಿ ಪಿ. ಉಷಾ**

ಮಹಾತ್ಮರ ಸ್ಮೃತಿಗಾಥೆಯನ್ನು ಬರೆಯಹೋದರೆ ಜನರ ಟೀಕೆಗೆ ಗುರಿಯಾಗಬೇಕಾದುದು ಸಹಜವೆ. ''ಇದು ಸ್ಮೃತಿ ಕಥೆಯೊ ಅಥವ ಆತ್ಮಕಥೆಯೊ? ತನ್ನನ್ನೆ ಪ್ರಚಾರಗೊಳಿಸಲು ಬರೆದಿದ್ದಾನೆ'' ಎಂದು ಕೆಲವರು ಹುಬ್ಬೇರಿಸುವುದುಂಟು. ಮಹಾತ್ಮರು ತಮ್ಮ ಬಗ್ಗೆ ಏನೂ ಬರೆಯುವುದೂ ಇಲ್ಲ, ಹೇಳುವುದೂ ಇಲ್ಲ. ಅವರ ವೈಯಕ್ತಿಕ ಜೀವನದ ಬಗ್ಗೆ ಪ್ರಶ್ನಿಸಿದರೆ ಅವರು ಮೌನವನ್ನು ತಾಳುತ್ತ ಬೇರೆ ವಿಷಯಗಳನ್ನೆತ್ತಿ ಮಾತು ಮರೆಸುತ್ತಾರೆ. ಆದರೆ ರಾಮಕೃಷ್ಣ ಮಹಾಸಂಘದ ಇತಿಹಾಸ ಹಾಗೂ ಆಧ್ಯಾತ್ಮಿಕ ಜೀವನ ಇವರ ಜೀವನದೊಂದಿಗ ಹೆಣೆದುಕೊಂಡಿದೆ.

ಪೂಜ್ಯ ಸ್ವಾಮಿ ಗಂಭೀರಾನಂದಜಿ ಮಹಾರಾಜರೊಡನೆ ೩೦ ವರ್ಷಗಳ ಕಾಲ ಪರಿಚಯವಿದ್ದು, ೭ ವರ್ಷ ಅವರೊಡನೆ ಇರುವ ಸೌಭಾಗ್ಯ ನನಗೆ ಒದಗಿತ್ತು. ೧ನೆಯ ಡಿಸೆಂಬರ್ ೧೯೫೮ರಲ್ಲಿ ಸ್ವಾಮಿ ಗಂಭೀರಾನಂದಜಿ ವೆಲಿಂಗ್‌ಟನ್ ಲೇನಿನ ಅದ್ವೈತ ಆಶ್ರಮದ ಅಧ್ಯಕ್ಷರಾಗಿದ್ದಾಗ ನಾನು ಅಲ್ಲಿ ಸೇರಿದೆ. ಪುಸ್ತಕಗಳ ಪ್ರೂಫ್ ಓದುವುದು ನನ್ನ ಕೆಲಸವಾಗಿತ್ತು. ಒಂದು ದಿನ ಮಾತಿನ ನಡುವೆ ಅವರೆಂದರು, ''ಸಾಧುವಾಗಬೇಕಾದರೆ ಮುಳುಗುಹಾಕಬೇಕು. ಲೆಕ್ಕಾಚಾರದಿಂದ ಸಾಧುವಾಗಲು ಸಾಧ್ಯವಿಲ್ಲ.'' ಕೆಲಸದಲ್ಲಿಯೂ ವ್ಯವಹಾರದಲ್ಲಿಯೂ ಅವರು ಬಹಳ ಗಂಭೀರ ಪ್ರಕೃತಿಯವರು. ಈ ದೃಷ್ಟಿಯಲ್ಲಿ ತಮ್ಮ ಗುರುವಿತ್ತ 'ಗಂಭೀರಾನಂದ' ಎಂಬ ಅವರ ಹೆಸರು ಸಾರ್ಥಕವೆನ್ನಬೇಕು. ಆದರೆ ನನ್ನೊಡನೆ ಅವರು ಅತ್ಯಂತ ಸ್ನೇಹದಿಂದಲೂ ಬಿಚ್ಚು ಹೃದಯದಿಂದಲೂ ವ್ಯವಹರಿಸುತ್ತಿದ್ದರು. ನಾನು ಅವರನ್ನು ಅತ್ಯಂತ ಶ್ರದ್ಧೆಯಿಂದ ಕಾಣುತ್ತಿದ್ದು ಅವರ ಅಸಾಮಾನ್ಯ ಜೀವನವನ್ನು ಅನುಸರಿಸುವ ಪ್ರಯತ್ನ ಮಾಡುತ್ತಿದ್ದೆ.

ವೆಲಿಂಗ್‌ಟನ್ ಲೇನಿನ ಆಶ್ರಮದ ನಾಲ್ಕನೆಯ ಮಹಡಿಯಲ್ಲಿ ಒಂದು ಚಿಕ್ಕ ಕೊಠಡಿಯಲ್ಲಿ ಅವರಿರುತ್ತಿದ್ದರು. ಅವರ ಪಕ್ಕದಲ್ಲಿ ಸರಿಷಾ ಕೇಂದ್ರದ ನಿರ್ಮೋಹಾನಂದಜಿಯವರ ಒಂದು ಮಂಚವಿತ್ತು. ಅವರು ವಾರದ ಮೂರು ದಿನ ಕಲ್ಕತ್ತೆಯಲ್ಲಿರುತ್ತಿದ್ದರು. ಕಿಟಿಕಿಯ ಎದುರು ಒಂದು ಆರಾಮ ಕುರ್ಚಿಯಲ್ಲಿ ಕುಳಿತು ಸ್ವಾಮಿ ಗಂಭೀರಾನಂದರು ಓದು-ಬರೆಹದ ಕಾರ್ಯಗಳನ್ನು ನಿರ್ವಹಿಸುತ್ತಿದ್ದರು. ಪಕ್ಕದವರ ಮೇಲೆ ದೃಷ್ಟಿ ಬೀಳುವುದೆಂದು ಅವರೆಂದೂ ಮಾಳಿಗೆಯಲ್ಲಿ ಓದುತ್ತಿರಲಿಲ್ಲ! ಅದ್ವೈತ ಆಶ್ರಮದಲ್ಲಿ ಅವರ ದಿನಚರಿ ಹೀಗಿತ್ತು:

ಬೆಳಗ್ಗೆ ೪-೩೦ಕ್ಕೆ ಎದ್ದು ಅವರು ೫ ಗಂಟೆಗೆ ಜಪ-ಧ್ಯಾನಕ್ಕೆ ಕುಳಿತುಕೊಳ್ಳುತ್ತಿದ್ದರು. ೬ ಘಂಟೆಗೆ ಪತ್ರಗಳಿಗೆ ಉತ್ತರವನ್ನಿತ್ತು



ಬೆಳಗಿನ ತರಗತಿಗಾಗಿ ಶಾಸ್ತ್ರಗಳನ್ನೋದುತ್ತಿದ್ದರು. ೬.೩೦ರ ಉಪಾಹಾರದ ಬಳಿಕ ೭ಕ್ಕೆ ಸಾಧು-ಬ್ರಹ್ಮಚಾರಿಗಳಿಗೆ ಕ್ಲಾಸ್ ತೆಗೆದುಕೊಳ್ಳುತ್ತಿದ್ದರು. ಐದು ವರ್ಷಗಳ ಕಾಲ ನಾನು ಅವರಿಂದ ಗೀತೆ, ಕೇನ ಹಾಗು ಛಾಂದೋಗ್ಯ ಉಪನಿಷತ್ತುಗಳು ಹಾಗೂ ಬ್ರಹ್ಮಸೂತ್ರ ಶಾಂಕರ ಭಾಷ್ಯಗಳನ್ನೋದಿದ್ದೇನೆ, ಅರ್ಧಗಂಟೆಯ ತರಗತಿ. ಆ ಬಳಿಕ ಅವರು ತಮ್ಮ ಕಾರ್ಯವನ್ನು ಪ್ರಾರಂಭಿಸುತ್ತಿದ್ದರು. ದೃಷ್ಟಿ ಚೆನ್ನಾಗಿರಲಿಲ್ಲ. ಆದ್ದರಿಂದ ಸುಮಾರು ಒಂದು ಘಂಟೆ ಕೆಲಸ ಮಾಡಿ ಕಣ್ಣುಗಳಿಗೆ ವಿಶ್ರಾಂತಿ ನೀಡಲು ಕಾರಿಡಾರ್‌ನಲ್ಲಿ ನಡೆಯುತ್ತಿದ್ದರು, ಇಲ್ಲವೆ ಕೆಳಗಿಳಿದು ಆಫೀಸಿಗೆ ಬಂದು ನಡೆದಾಡುತ್ತಿದ್ದರು. ಮತ್ತೆ ೧೧ರ ವರೆಗೆ ಕೆಲಸ ನಂತರ ಸ್ನಾನ ಮಾಡಿ ಜಪ ಮಾಡುತ್ತಿದ್ದರು. ೧೨ಕ್ಕೆ ಭೋಜನಾನಂತರ ೧ ಗಂಟೆಯ ವರೆಗೆ ಸ್ವಲ್ಪ ದಿನಪತ್ರಿಕೆಯನ್ನೋದುವರು. ೨ ಗಂಟೆಯಿಂದ ೫ ಗಂಟೆಯ ತನಕ ಮತ್ತೆ ಕೆಲಸ. ಅದರ ಮಧ್ಯೆ ೪ ಗಂಟೆಯ ಹೊತ್ತಿಗೆ ಒಂದು ಕಪ್ ಚಹಾ ಕುಡಿಯುವರು. ೫-೬ರ ವರೆಗೆ ಹೊರಗಡೆ ಸುತ್ತಾಡಿಕೊಂಡು ಬರುತ್ತಿದ್ದರು. ಅವರ ಚಟುವಟಿಕೆಯ ಜತೆಗೆ ಗಡಿಯಾರವನ್ನು ಹೊಂದಿಸ

ಬಹುದಾಗಿತ್ತು. ನಂತರ ಕಾರಿಡಾರ್‌ನಲ್ಲಿ ನಡೆದಾಡುತ್ತ ಮೆಲುದನಿಯಲ್ಲಿ ಹಾಡುತ್ತಿದ್ದರು. ತದನಂತರ ೮ರ ವರೆಗೆ ಜಪ, ಧ್ಯಾನ. ಕಣ್ಣಿನ ಸಮಸ್ಯೆಯಿಂದಾಗಿ ರಾತ್ರಿ ಕೆಲಸಮಾಡುವುದನ್ನು ನಿಲ್ಲಿಸಿಬಿಟ್ಟಿದ್ದರು. ರಾತ್ರಿ ೯ರಿಂದ ೯.೩೦ರ ವರೆಗೆ ಕ್ಲಾಸ್‌ನಲ್ಲಿ ಉಪಸ್ಥಿತರಿರುತ್ತಿದ್ದರು. ಒಬ್ಬ ಹೊಸ ಬ್ರಹ್ಮಚಾರಿಗಳು ನೂತನವಾಗಿ ಬಿಡುಗಡೆಯಾದ ಪುಸ್ತಕವನ್ನು ಹದಿನೈದು ನಿಮಿಷಗಳು ಓದುವುದು ಅದ್ವೈತ ಆಶ್ರಮದ ನಿಯಮವಾಗಿತ್ತು. ಓದುವಾಗ ನಾನೇನಾದರೂ ತಪ್ಪಾಗಿ ಉಚ್ಚಾರಣೆ ಮಾಡಿದರೆ ಗಂಭೀರ ಮಹಾರಾಜರು, ''ಅರೆ, ಈ ಶಬ್ದವನ್ನೊಮ್ಮೆ ಆಕ್ಸ್‌ಫರ್ಡ್ ಡಿಕ್ಷನರಿಯಲ್ಲಿ ನೋಡು'' ಎನ್ನುತ್ತಿದ್ದರು. ಎಲ್ಲರೆದುರು ಲಜ್ಜೆಗೇಡಾಗುವೆನೆಂಬ ಭಯದಿಂದ ನಾನು ಮೊದಲೇ ಓದಿಕೊಂಡು ಹೋಗುತ್ತಿದ್ದೆ. ೧೫ ನಿಮಿಷಗಳು ಮಾತನಾಡಿ ಅವರು ತಮ್ಮ ಕೋಣೆಗೆ ಹಿಂದಿರುಗುತ್ತಿದ್ದರು. ನಿರ್ಜನ ಜಾಗದಲ್ಲಿ ಗೋಪ್ಯವಾಗಿ ಏಕಾಂಗಿಯಾಗಿರಲು ಅವರು ಇಷ್ಟಪಡುತ್ತಿದ್ದರು. ಅವರೊಂದಿಗೆ ಯಾರಾದರೂ ಮಾತನಾಡಲು ಬರುತ್ತಿದ್ದುದು ಅಪರೂಪ. ಭಕ್ತರುಗಳೊಡನೆ ಹರಟೆ ಹೊಡೆಯುವುದು ಅವರಿಗೆ ಹಿಡಿಸುತ್ತಿರಲಿಲ್ಲ; ಕೆಲಸಕ್ಕೆ ಸಂಬಂಧಪಟ್ಟ ಮಾತನ್ನಾಡಿ ಎದ್ದು ಬಿಡುತ್ತಿದ್ದರು. ನೇರವಾಗಿ ಮಾತನಾಡುವವರು; ವಟವಟನೆ ಮಾತನಾಡುವುದನ್ನು ಇಷ್ಟಪಡುತ್ತಿರಲಿಲ್ಲ.

ಕಾರ್ಯನಿಮಿತ್ತವಾಗಿ ನನಗೆ ಆಗಾಗ ಅವರ ಕೋಣೆಗೆ ಹೋಗಬೇಕಾಗುತ್ತಿತ್ತು. ಅವರ ಕಾರ್ಯಸಾಧನೆಯನ್ನು ನೋಡಿ ಚಕಿತನಾಗುತ್ತಿದ್ದೆ. ವೆಲ್ಲಿಂಗ್‌ಟನ್ ಆಶ್ರಮದಲ್ಲಿದ್ದಾಗ ಅವರು ಪ್ರವ್ರಾಜಿಕಾ ಮುಕ್ತಿಪ್ರಾಣಾರವರು ಬರೆದ ನಿವೇದಿತಾರ ಜೀವನದ ಹಸ್ತಪ್ರತಿಯನ್ನೋದುತ್ತಿದ್ದರು. ಒಂದು ದಿನ ನೋಡಿದೆ, ಹೊಟ್ಟೆ ನೋವಿನ ಉಪಶಮನಕ್ಕಾಗಿ ಬಿಸಿನೀರಿನ ಬ್ಯಾಗನ್ನು ತಮ್ಮ ಹೊಟ್ಟೆಯ ಮೇಲೆ ಅದುಮಿ ಹಿಡಿದು, ಶ್ರೀ ಹರಿಪದ ಮಿತ್ರರು ಬರೆದ ಸ್ವಾಮೀಜಿಯವರ ನೆನಪುಗಳನ್ನು (Reminiscences of Swami Vivekananda ಪುಸ್ತಕಕ್ಕಾಗಿ) ಇಂಗ್ಲಿಷಿಗೆ ಅನುವಾದಿಸುತ್ತಿದ್ದಾರೆ. ನಾನೆಂದೆ, ''ಮಹಾರಾಜ್, ಸ್ವಲ್ಪ ಮಲಗಿ, ನೋವು ಕಡಿಮೆಯಾದಾಗ ಮತ್ತೆ ಕೆಲಸ ಮಾಡಬಹುದು'' ಕೂಡಲೆ ಅವರು ಉತ್ತರಿಸಿದರು, ''ಹಾಸಿಗೆಯಲ್ಲಿ ಮಲಗಿದರೆ ನೋವು ಹೊರಟುಹೋಗುವುದೆಂದು ಭಾವಿಸಿದೆಯಾ? ಸ್ವಾಮೀಜಿಯವರ ಕೆಲಸದಲ್ಲಿ ನೋವು ಮರೆಯುತ್ತದೆ.'' ನಾನು ಅವಾಕ್ಕಾದೆ. ಈ ಘಟನೆಯನ್ನು ನಾನೆಂದೂ ಮರೆಯಲಾರೆ. ನನಗಾಗ ೨೩-೨೪ ವರ್ಷ ವಯಸ್ಸು. ಸ್ವಾಮೀಜಿಯವರ ಕಾರ್ಯವನ್ನು ಮಾಡುವ ಪರಿಯನ್ನು ನಾನು ಅವರಿಂದ ಕಲಿತೆ. ಸ್ವಾಮಿ ಸಂಶುದ್ಧಾನಂದರು (ಭವತಾರಣ ಮಹಾರಾಜ್) ಬಂದು ಗಂಭೀರಾನಂದಜಿಯವರಿಗೆ ಹೇಳಿದರು, ''ಬಾರಾಸಾತ್ ಆಶ್ರಮದಿಂದ ಪ್ರಕಟವಾಗಲಿರುವ ಮಹಾಪುರುಷ ಮಹಾರಾಜರ (ಸ್ವಾಮಿ ಶಿವಾನಂದಜಿ) ಒಂದು 'ಸ್ಮೃತಿಕಥೆ'ಗಾಗಿ ನೀವು ಅವರ ಸಂಕ್ಷಿಪ್ತ ಜೀವನವನ್ನು ಬರೆದು ಕೊಡಬೇಕು.'' ಕೂಡಲೆ ಮಹಾರಾಜರು ಅದಕ್ಕೊಪ್ಪಿದರು. ಆಗ ಅವರು ಸ್ವಾಮೀಜಿಯವರ Complete Works ಕೃತಿಯ ಶಬ್ದಸೂಚಿಯನ್ನು ತಯಾರಿಸುತ್ತಿದ್ದು ಬಹಳವೇ ಶ್ರಮಪಡುತ್ತಿದ್ದರು. ಇಷ್ಟೊಂದು ಕೆಲಸದ ನಡುವೆ ತಮ್ಮ ಗುರುಗಳ ಜೀವನ ಕಥೆಯನ್ನು ಬರೆದು ನನಗೆ ಕೊಡುತ್ತ ''ನನ್ನ ಕೈಬರಹ ಅಷ್ಟೊಂದು ಚೆನ್ನಾಗಿಲ್ಲ. ನೀನಿದನ್ನು ಸ್ವಲ್ಪ ಚೆನ್ನಾಗಿ ಬರೆದು ಪ್ರೆಸ್ಸಿಗೆ ಕಳುಹಿಸು'' ಎಂದರು.

ಒಮ್ಮೆ ಅದ್ವೈತ ಆಶ್ರಮದ ಭಂಡಾರಿ (ಅಂದರೆ, ಅಡುಗೆ ಮನೆ ಮೇಲ್ವಿಚಾರಕ) ಯಾಗಿದ್ದ ನಮ್ಮ ಬ್ರಹ್ಮಚಾರಿಗಳೊಬ್ಬರು ದಕ್ಷಿಣ ಭಾರತದ ಬ್ರಹ್ಮಚಾರಿಗಳೊಬ್ಬರಿಗೆ ಮೊಟ್ಟೆಯಿಂದ ತಯಾರಿಸಿದ್ದ ಫ್ರೆಂಚ್ ಟೋಸ್ಟ್ ತಿನ್ನಿಸಿದರು. ಆ ಬ್ರಹ್ಮಚಾರಿಗಳಾದರೂ ಕಟ್ಟಾ ಸಸ್ಯಹಾರಿ. ಮೊದಲು ತಿಳಿಯದಿದ್ದರೂ ನಂತರ ಅವರಿಗೆ ತಿಳಿದಾಗ ಬಹಳವೇ ಅಸ್ವಸ್ಥರಾಗಿದ್ದು, ವಿಷಯವನ್ನು ಗಂಭೀರ ಮಹಾರಾಜರಿಗೆ ತಿಳಿಸಿದರು. ಮಹಾರಾಜರು ಭಂಡಾರಿ ಮಹಾರಾಜರನ್ನು ಕರೆಸಿ, ''ಇದೇ ಮೊದಲು, ಇದೇ ಕೊನೆ, ಮತ್ತೊಮ್ಮೆ ನೀನೇನಾದರೂ ಹೀಗೆ ಮಾಡಿದರೆ ರಾಮಕೃಷ್ಣ ಮಿಷನ್ನನ್ನು ಬಿಟ್ಟು ಹೋಗಬೇಕಾಗುವುದು. ಠಾಕೂರರು ಯಾರ ಭಾವವನ್ನೂ ನಷ್ಟಮಾಡಲಿಲ್ಲ, ತಿಳಿದುಕೊ'' ಎಂದರು. ಅವರು ಕೋಪಗೊಂಡರೆ ಎಷ್ಟು ಕಠೋರವಾಗಿರುತ್ತಿದ್ದರೆಂಬುದು ಹೇಳಲಸಾಧ್ಯ.

ಮಾಯಾವತಿಯಲ್ಲಿ ಅವರ ಸಂಗ-ಸೌಭಾಗ್ಯ ಬದಲಾಗದಿದ್ದರೂ ಶ್ರೀರಾಮಕೃಷ್ಣ-ಸ್ವಾಮೀಜಿ ಹಾಗೂ ವೇದಾಂತ ಸಂಬಂಧಿತ ಗ್ರಂಥಗಳ ಪ್ರಕಾಶನಕ್ಕಾಗಿ ಅವರು ಮಾಡಿದ ಅಸಾಧಾರಣ ಪರಿಶ್ರಮವನ್ನು ಕಂಡಿದ್ದೇನೆ. ಓದದೆ ಅಥವಾ ತಿದ್ದುಪಡಿ ಮಾಡದೆ ಅವರೆಂದೂ ಪುಸ್ತಕವನ್ನು ಮುದ್ರಣಕ್ಕಾಗಿ ಪ್ರೆಸ್ಸಿಗೆ ಕೊಡುತ್ತಿರಲಿಲ್ಲ. ಪುಸ್ತಕ ಮುಗಿಯುವ ಮೊದಲೇ ಅವರಿಗೆ ತಿಳಿಸಬೇಕಾಗುತ್ತಿತ್ತು. ಇದರ ನಡುವೆ ಅವರು ತಮ್ಮ ಲೇಖನಗಳನ್ನು ಬರೆಯುತ್ತಿದ್ದರು. ಬ್ರಹ್ಮಸೂತ್ರವನ್ನು ಇಂಗ್ಲಿಷಿಗೆ ಅನುವಾದಿಸಲು ಅವರಿಗೆ ಐದು ವರ್ಷಗಳು ಬೇಕಾದವು. ನಂತರ ಅವರು ಪೋರ್ಟೆಬಲ್ ಟೈಪ್‌ರೈಟರ್‌ನಲ್ಲಿ ಟೈಪ್ ಮಾಡಲಾರಂಭಿಸಿದಾಗ ಮ್ಯಾನೇಜರ್ ಮಹಾರಾಜರು ಒಬ್ಬ ಪ್ರೊಫೆಷನಲ್ ಟೈಪಿಸ್ಟ್‌ಅನ್ನು ಗೊತ್ತು ಮಾಡಿ ಈ ಕೆಲಸದಿಂದ ಅವರನ್ನು ಬಿಡುಗಡೆ ಮಾಡಿದರು. ಸ್ವಾಮೀಜಿಯವರ ಶತಮಾನೋತ್ಸವದ ಸಮಯ ಮನ್ಮಥನಾಥ ಭಟ್ಟಾಚಾರ್ಯರಿಗೆ ಸ್ವಾಮೀಜಿಯವರ ಬರೆದ ನೂತನ ಪತ್ರವೊಂದು ದೊರಕಿದ್ದು ಅವರು ಅದನ್ನು ಇಂಗ್ಲಿಷಿಗೆ ಅನುವಾದಿಸಿ, ನಾನು ಹೇಳಿದಂತೆ ಸ್ವಾಮಿ ಮಾಧವಾನಂದರ ಪರಿಶೀಲನೆಗೆ ಕಳುಹಿಸಿಕೊಟ್ಟರು. ಏನೇ ಆಗಲಿ, ಅದನ್ನು ನೋಡಿದ ಅವರು, ''ಗಂಭೀರಾನಂದರು ಅನುವಾದಿಸಿದರೆಂದರೆ ಅದನ್ನು ನಾನು ಮತ್ತೆ ನೋಡುವ ಅಗತ್ಯವೇನು?'' ಎಂದು ಅಭಿಪ್ರಾಯಪಟ್ಟರು. ಏನೇ ಆಗಲಿ, ಅವರು ಅದನ್ನೋದಿ ಗಂಭೀರ ಮಹಾರಾಜರಿಗೆ ಹಿಂದಿರುಗಿ ಕಳುಹಿಸಿದರು. ಸ್ವಾಮೀಜಿಯವರ Complete Works ನಲ್ಲಿ ಯಾವುದೊಂದೂ ತಪ್ಪು ಇರದಂತೆ ಅವರು ಮನಃಪೂರ್ವಕವಾಗಿ ಶ್ರಮಿಸಿದ್ದರು. ಶ್ರೀಮತಿ ಮೇರಿ ಲೂಯಿ ಬರ್ಕ್‌ರವರ 'New Discoveries' ಕೃತಿಯ ವಾಸ್ತವಾಂಶ ಸಂಯೋಜನೆಯು ಸ್ವಾಮಿ ಗಂಭೀರಾ

ನಂದರ ತೀಕ್ಷ್ಣ ವಿವೇಚನಾ ಶಕ್ತಿಯ ಪರಿಚಯವನ್ನು ಮಾಡಿ ಕೊಡುತ್ತದೆ.

೧೯೬೧ ರಲ್ಲಿ ವೆಲ್ಲಿಂಗ್‌ಟನ್ ಲೇನಿನ ಅದ್ವೈತ ಆಶ್ರಮವನ್ನು ದೇಹಿ ಎಂಟಾಲಿ ರೋಡ್‌ಗೆ ವರ್ಗಾಯಿಸಲಾಯಿತು. ಮಹಾರಾಜರ ಸಲಹೆಯಂತೆ ಹೊಸ ಕಟ್ಟಡದ ನಿರ್ಮಾಣವನ್ನು ಗಂಭೀರ ಮಹಾರಾಜರ ಸಲಹೆಯಂತೆ ಸ್ವಾಮಿ ಯೋಗಾತ್ಮಾನಂದಜಿಯವರು ನಿರ್ವಹಿಸಿದರು. ಆಶ್ರಮದ ಪ್ರತಿಯೊಂದು ಕೆಲಸದಲ್ಲಿಯೂ ಅವರು ಉತ್ಸಾಹದಿಂದ ಭಾಗವಹಿಸುತ್ತಿದ್ದರು. ಪರಸ್ಪರ ತಪ್ಪು ತಿಳುವಳಿಕೆ ಸಂಭವಿಸದಂತೆ ಪ್ರತಿಯೊಬ್ಬನಿಗೂ ಬೇರೆ ಬೇರೆ ಕಾರ್ಯವನ್ನು ವಿತರಿಸಲಾಗಿತ್ತು.

೧೯೫೯ರಲ್ಲಿ ಅಥವಾ ೧೯೬೦ ಜನವರಿ ೧ ರಂದು ಕಾಶೀಪುರದ ಕಲ್ಪತರು ದಿನದ ಕಾರ್ಯಕ್ರಮದಲ್ಲಿ ಅವರು ನೀಡಿದ ಅಧ್ಯಕ್ಷ ಭಾಷಣವನ್ನು ಕೇಳಲು ನಾನು ಹೋಗಿದ್ದೆ. ಖ್ಯಾತ ಭಾಷಣಕಾರರಾದ ಹರಿಪದ ಭಾರತಿಯವರು ತಮ್ಮ ಭಾಷಣದಲ್ಲಿ ಶ್ರೀರಾಮಕೃಷ್ಣರು ಗೃಹಸ್ಥರಿಗಾಗಿ ಅವತರಿಸುವರೆಂದೂ, ಸಂನ್ಯಾಸಿಗಳು ಭಗವಂತನನ್ನು ಪಡೆಯುವ ಉದ್ದೇಶದಿಂದ ತಮ್ಮ ಸರ್ವಸ್ವವನ್ನೂ ತ್ಯಜಿಸಿರುವರೆಂದೂ ಹೇಳಿದರು. ತಮ್ಮ ಅಧ್ಯಕ್ಷ ಭಾಷಣದಲ್ಲಿ ಗಂಭೀರ ಮಹಾರಾಜರು, ''ಶ್ರೀ ರಾಮಕೃಷ್ಣರು ಗೃಹಸ್ಥರಿಗಾಗಿಯೂ ಬರಲಿಲ್ಲ, ಸಂನ್ಯಾಸಿಗಳಿಗಾಗಿಯೂ ಬಂದದ್ದಲ್ಲ. ಭಗವಂತನ ಸಾಕ್ಷಾತ್ಕಾರವನ್ನು ಯಾರು ತಮ್ಮ ಮನಸ್ಸು-ಪ್ರಾಣಗಳಿಂದ ವ್ಯಾಕುಲಗೊಂಡು ಪಡೆಯಲಿಚ್ಛಿಸುವರೋ ಅಂತವರಿಗಾಗಿ ಅವರು ಬಂದಿರುವರು,'' ಎಂಬುದನ್ನು ಸ್ಪಷ್ಟಪಡಿಸಿದರು. ಅದೆಷ್ಟು ಸೊಗಸಾಗಿ ಬಿಡಿಸಿ ಹೇಳುವ ಸಾಮರ್ಥ್ಯ ಅವರದು! ಗಂಭೀರ ಮಹಾರಾಜರಿಂದ ಕಲಿತ ಒಂದು ವಿಷಯವೆಂದರೆ — ಕೊಟ್ಟ ವಿಷಯವನ್ನು ಹೊರತು ಭಾಷಣದಲ್ಲಿ ಮತ್ತಾವ ಅಪ್ರಾಸಂಗಿಕ ವಿಷಯವನ್ನು ಎಳೆದು ತರಬಾರದು. ಗಂಭೀರ ಮಹಾರಾಜರು ನೇರವಾಗಿ ನುಡಿಯುತ್ತಿದ್ದರು. ಕೊಟ್ಟ ವಿಷಯದ ಬಗ್ಗೆ ಮಾತ್ರವೇ ಹೇಳುತ್ತಿದ್ದರು. ಅಸಂಬದ್ಧ ಮಾತಾಗಲಿ, ಅತಿಶಯೋಕ್ತಿಯನ್ನಾಗಲಿ ಅವರು ಬಳಸುತ್ತಿರಲಿಲ್ಲ. ಒಂದು ದಿನ ಅವರೊಂದು ತಮಾಷೆಯ ಕತೆಯನ್ನು ನನಗೆ ಹೇಳಿದರು: ''ಕೇಳು, ಒಬ್ಬ ವ್ಯಕ್ತಿ ಯಾವುದೋ ವಿಷಯವನ್ನು ಉತ್ಪ್ರೇಕ್ಷೆ ಮಾಡಿ ಹೇಳುತ್ತಿದ್ದನು. ಅವನ ಸ್ನೇಹಿತರು ಅವನಿಗೆ ಯಾವಾಗಲೂ, 'ನೀನು ಯಾವಾಗಲೂ ಅತಿಶಯೋಕ್ತಿ ಬಳಸಿ ಮಾತನಾಡುತ್ತೀಯೆ' ಎಂದು ಟೀಕಿಸುತ್ತಿದ್ದರು. 'ನಾನು ಅತಿಶಯೋಕ್ತಿಯನ್ನು ಉಪಯೋಗಿಸಿದಾಗ, ನೀನು ನನ್ನ ಬೆನ್ನ ಮೇಲೆ ಗುದ್ದು' ಎಂದನವನು. ಮಾತಿನ ನಡುವೆ ಅವನೆಂದ, 'ಹುಲಿಯನ್ನು ಬೇಟೆಯಾಡಲು ಹೋದೆ. ಹುಲಿ ೧೮ ಅಡಿ ದೊಡ್ಡದು.' ಸ್ನೇಹಿತರು ಅವನ ಬೆನ್ನ ಮೇಲೆ ಗುದ್ದಿದರು. ಅವನು 'ಅರೆ, ನನ್ನ ಬಳಿ ಅಳತೆ ಟೇಪು ಇರಲಿಲ್ಲ. ಹುಲಿ ೧೫ ಫುಟ್ ಅಲ್ಲದಿದ್ದರೂ ೧೨ ಫುಟ್ ಅಂತೂ ಖಂಡಿತವಾಗಿಯೂ ಇತ್ತು.' ಹೀಗೆ ಹುಲಿಯನ್ನು ೬ ಫುಟ್‌ನ ವರೆಗೆ ಇಳಿಸಿದರೆ ಮತ್ತೊಂದು ಗುದ್ದು! ಕಡೆಗೆ ಹೇಳಿದ, 'ಇನ್ನೇನು ಹೇಳಲಿ, ಹುಲಿಗೆ ಬಾಲವಿರಲಿಲ್ಲ, ಎನ್ನಲೆ?' ''

ಗಂಭೀರ ಮಹಾರಾಜರು ಅಂತರ್ಮುಖಿಯೂ ನಿರಭಿಮಾನಿಗಳೂ ಆಗಿದ್ದರು. ತಮ್ಮ ಬಗ್ಗೆ ಎಂದೂ ಹೇಳಿಕೊಂಡವರಲ್ಲ. ಎಷ್ಟು ನುರಿತ ಭಾಷಣಕಾರರಾಗಿದ್ದರೂ ಅನೇಕ ಪುಸ್ತಕಗಳ ಲೇಖಕರಾಗಿದ್ದರೂ ಎಂದೂ ಅವುಗಳ ಬಗ್ಗೆ ಪ್ರಸ್ತಾಪಿಸುತ್ತಿರಲಿಲ್ಲ. ಯಾರಾದರೂ ಅವುಗಳ ಬಗ್ಗೆ ಚರ್ಚಿಸಿದರೆ ಅದನ್ನು ಲೆಕ್ಕಿಸದೆ ಬೇರೆ ವಿಷಯಗಳಿಗೆ ಮಾತನ್ನು ತಿರುಗಿಸುತ್ತಿದ್ದರು.

ಟ್ರಾಮ್ ಅಥವ ಬಸ್ ಹಿಡಿದು ಮಠಕ್ಕೆ ಹೋಗುವಾಗ, ಭಂಡಾರಿಯಿಂದ ಒಂದು ರೂಪಾಯಿಯನ್ನು ತೆಗೆದುಕೊಂಡು, ಹಿಂದಿರುಗಿದಾಗ ತಮ್ಮ ಖರ್ಚಿನ ಲೆಕ್ಕವನ್ನೊಪ್ಪಿಸುತ್ತಿದ್ದರು. ಮಾಯಾವತಿಗೆ ಹೋಗುವಾಗ ಟ್ಯಾಕ್ಸಿಯಲ್ಲಿ ಅವರನ್ನು ಹೌರಾ ಸ್ಟೇಷನ್‌ಗೆ ಬಿಡಬೇಕಾಗುತ್ತಿತ್ತು. ಬೇಲೂರು ಮಠದಲ್ಲಿ ಟ್ರಸ್ಟಿ ಮೀಟಿಂಗಿಗೆ ಹೋಗುವಾಗ ಪೂಜ್ಯ ದಯಾನಂದಜಿ ಹಾಗು ಗಹನಾನಂದಜಿ ಅವರನ್ನು ಅದ್ವೈತ ಆಶ್ರಮದಿಂದ ಕರೆದುಕೊಂಡು ಹೋಗುತ್ತಿದ್ದರು. ಅವರಿಗೆ ವಿಶೇಷವಾಗಿ ಯಾವ ಭಕ್ತರೂ ಇರಲಿಲ್ಲ. ಅತ್ಯಂತ ಸಾಧಾರಣವಾದ ಉಡುಗೆಯನ್ನು ತೊಡುತ್ತಿದ್ದರು. ಅನ್ನ-ಸಾರು (ಬಂಗಾಳಿ ಝೋಲ್) ಊಟ ಮಾಡುತ್ತಿದ್ದರು. ನಾಲಗೆಯ ಮೇಲೆ ಸಂಪೂರ್ಣ ಹತೋಟಿಯಿತ್ತು. 'ಜಿತಂ ಸರ್ವಂ ಜಿತೇ ರಸೇ' ಎಂಬ ಭಾಗವತದ ಉಕ್ತಿಯನ್ನು ತಮ್ಮ ಜೀವನದಲ್ಲಿ ತೋರಿಸಿದ್ದರು. ೧೯೬೩ರಲ್ಲಿ ಆಶ್ರಮದ ಆಫೀಸಿನಲ್ಲಿ ನಾನು ಕೆಲಸ ಮಾಡುತ್ತಿದ್ದೆ; ಇದ್ದಕ್ಕಿದ್ದಂತೆ ಭಂಡಾರಿ ಮಹಾರಾಜರು ಹೊರಟು ಹೋದಾಗ ನಾನು ಅವರ ಕೆಲಸವನ್ನೂ ವಹಿಸಿಕೊಳ್ಳಬೇಕಾಯಿತು. ಗಂಭೀರ ಮಹಾರಾಜರಿಗಾಗಿ ಹೆಸರಿಗಾಗಿ ಮಾತ್ರವೆ ಎಣ್ಣೆ-ಮಸಾಲೆಗಳನ್ನು ಹಾಕಿ ಅಲೂಗಡ್ಡೆ, ಪಪ್ಪಾಯಿ, ಬಾಳೇಕಾಯಿ ಹಾಗು ಎರಡು ತುಂಡು ಮೀನು ಹಾಕಿ ಮಧ್ಯಾಹ್ನ ಹಾಗು ರಾತ್ರಿ ಸಾರು ಮಾಡಿ ಕೊಡಬೇಕಾಗಿತ್ತು. ಒಂದು ದಿನ ನಾನೆಂದೆ, ''ನಿಮ್ಮ ಬಾಯಿಗೆ ಅರುಚಿ ಎನ್ನಿಸುವುದಿಲ್ಲವೆ? ಸ್ವಲ್ಪ ತರಕಾರಿ ಬದಲಾಯಿಸಿ ಕೊಡಲೆ?'' ಅವರೆಂದರು, ''ಬೇಕಾಗಿಲ್ಲ! ನೀನು ಈಗ ಕೊಡುತ್ತಿದ್ದಂತೆಯೇ ಕೊಟ್ಟು ಹೋಗು.'' ಅವರು ಇಷ್ಟ-ಅನಿಷ್ಟಗಳನ್ನು ಮೀರಿ ದ್ವಂದ್ವಾತೀತ ಅವಸ್ಥೆಯನ್ನು ಅಭ್ಯಾಸ ಮಾಡುತ್ತಿದ್ದರು.

ಸುರೇಂದ್ರನಾಥ ಚಕ್ರವರ್ತಿ ಶ್ರೀಮಾತೆಯವರ ಶಿಷ್ಯರು. ಪತ್ನಿಯನ್ನು ಕಳೆದುಕೊಂಡಿದ್ದ ಅವರು ಗಂಭೀರ ಮಹಾರಾಜರ ಹತ್ತಿರ ಬಂದು ತಮ್ಮ ದುಃಖವನ್ನು ತೋಡಿಕೊಳ್ಳುತ್ತಿದ್ದರು. ಗಂಭೀರ ಮಹಾರಾಜರು ಅವರಿಗೆ ನನ್ನನ್ನು ಪರಿಚಯಿಸುತ್ತ ''ನೀವು ಇವನೊಂದಿಗೆ ಮಾತಾಡಿ, ನನಗೆ ಅಷ್ಟೊಂದು ಸಮಯವಿಲ್ಲ'' ಎಂದರು. ಆ ಬಳಿಕ ಸುರೇನ್ ಬಾಬು ತನ್ನ ದುಃಖವನ್ನೆಲ್ಲ ನನ್ನ ಬಳಿ ಬಂದು ಹೇಳುತ್ತಿದ್ದರು. ಭವಭೂತಿಯ 'ಉತ್ತರ ರಾಮಚರಿತೆ'ಯ ಆದರ್ಶ ವ್ಯಕ್ತಿಯ ಉದಾಹರಣೆ ಕೊಡುತ್ತ ''ವಜ್ರಾದಪಿ ಕಠೋರಾಣಿ, ಮೃದೂನಿ ಕುಸುಮಾದಪಿ' ಎಂಬ

ಪರಸ್ಪರ ವಿರೋಧ ಭಾವಗಳನ್ನು ಗಂಭೀರ ಮಹಾರಾಜರ ಜೀವನದಲ್ಲಿ ಗಮನಿಸಿರುವೆ.

ಶ್ಯಾಮಾಲಾತಾಲ್ ಆಶ್ರಮದ ಅಧ್ಯಕ್ಷರಾಗಿದ್ದ ಸ್ವಾಮಿ ಶಿವಸ್ವರೂಪಾನಂದಜಿ (ಮತಿ ಮಹಾರಾಜ್) ಕೆಲವು ದಿನ ಅದ್ವೈತ ಆಶ್ರಮದಲ್ಲಿದ್ದರು. ಒಂದು ದಿನ ಮಾತಿನ ಮಧ್ಯೆ ಗಂಭೀರಾನಂದರಿಗೆ, ''ನೀವು ಮೌನವಾಗಿ ಕೋಣೆಯಲ್ಲಿ ಕುಳಿತು ಕೆಲಸ ಮಾಡುತ್ತೀರಿ. ಸಾಧು-ಬ್ರಹ್ಮಚಾರಿಗಳಿಗೆ ಉಪದೇಶವನ್ನು ನೀಡದಿದ್ದರೆ ಅವರು ಏನು ತಾನೆ ಕಲಿಯುತ್ತಾರೆ?'' ಎಂದರು. ಪ್ರತ್ಯುತ್ತರವಾಗಿ ಅವರು, ''ನನ್ನ ಜೀವನನ್ನು ಅವರು ನೋಡುತ್ತಿಲ್ಲವೆ?'' ಎಂದಿಷ್ಟೆ ಹೇಳಿದರು. ಠಾಕೂರರು, ಶ್ರೀಮಾತೆ ಹಾಗು ಸ್ವಾಮೀಜಿಯವರ ಆದರ್ಶಗಳು ಅವರ ಜೀವನದಲ್ಲಿ ವಿಕಾಸಗೊಂಡಿದ್ದವು.

ಸ್ವಾಮಿ ಶಾಶ್ವತಾನಂದರ ದೇಹತ್ಯಾಗದ ಬಳಿಕ ಸ್ವಾಮಿ ವೀರೇಶ್ವರಾನಂದಜಿಯವರು ಮಠ-ಮಿಷನ್ನಿನ ಕಾರ್ಯವನ್ನು ಒಬ್ಬಂಟಿಗರಾಗಿ ನಿರ್ವಹಿಸುತ್ತಿದ್ದರು. ಗಂಭೀರ ಮಹಾರಾಜರನ್ನು ಮಠ-ಮಿಷನ್ನಿನ ಸಹ-ಕಾರ್ಯದರ್ಶಿಗಳಾಗಲು ಕೇಳಿಕೊಂಡಾಗ, ಸ್ವಾಮೀಜಿಯವರ ಜನ್ಮ ಶತಾಬ್ದಿಗೆ ಸಂಬಂಧಪಟ್ಟ ಕಾರ್ಯಗಳು ಭರದಿಂದ ಸಾಗುತ್ತಿದ್ದು, ಅವರು ಮೊದಲು ಅದಕ್ಕೊಪ್ಪಲಿಲ್ಲ. ಆ ಬಳಿಕ ಸ್ವಾಮಿ ಮಾಧವಾನಂದಜಿಯವರ ಆದೇಶದ ಮೇರೆಗೆ ಸಹ-ಕಾರ್ಯದರ್ಶಿಗಳಾಗಿ ಅವರು ಬೇಲೂರು ಮಠಕ್ಕೆ ತೆರಳಿದರು. ಗಂಭೀರ ಮಹಾರಾಜರ ಬೀಳ್ಕೊಡುಗೆಗಾಗಿ ಅದ್ವೈತ ಆಶ್ರಮದಲ್ಲಿ ವಿಶೇಷ ಭಂಡಾರವನ್ನು ಏರ್ಪಡಿಸಲಾಗಿತ್ತು. ನಾನಾಗ ಭಂಡಾರಿಯಾಗಿದ್ದೆ. ಸುಮಾರು ೨೫೦ ಸಾಧು-ಬ್ರಹ್ಮಚಾರಿಗಳಿಗೆ ಔತಣದ ವ್ಯವಸ್ಥೆ ಮಾಡಬೇಕಾಗಿದ್ದು ಅದಕ್ಕಾಗಿ ತುಂಬ ಓಡಾಡಬೇಕಾಗಿತ್ತು. ನನ್ನ ಅವಸ್ಥೆಯನ್ನು ಗಮನಿಸಿದ ಗಂಭೀರ ಮಹಾರಾಜರು, ''ನನ್ನನ್ನು ಆಶ್ರಮದಿಂದ ಹೊರಗೋಡಿಸಲು ನೀನು ಇಷ್ಟೊಂದು ಶ್ರಮಪಡುವುದೇಕೆ?'' ಎಂದರು. ಇವು ತಮಾಷೆಯಾಗಿ ಆಡಿದ ಮಾತುಗಳಾದರೂ ಅವರ ನಿರ್ಲಿಪ್ತತೆ ಹಾಗು ಅನಾಸಕ್ತಿ ಇದರಲ್ಲಿ ಎದ್ದು ಕಾಣುತ್ತದೆ.

೧೯೬೪ರಲ್ಲಿ ನಾನು ಟ್ರೇನಿಂಗ್ ಸೆಂಟರಿಗೆ ಹೋದೆ. ಆಗ ಗಂಭೀರಾನಂದಜಿ ಸಹ ಕಾರ್ಯದರ್ಶಿಗಳಾಗಿದ್ದು, ಲೆಗೆಟ್ ಹೌಸ್‌ನ ನಡುವಿನ ಕೋಣೆಯಲ್ಲಿದ್ದರು. ನಾನು ಪ್ರತಿ ಭಾನುವಾರದಂದು ಪುಸ್ತಕಗಳ ಮೇಲೆ ಸೇರಿದ್ದ ಧೂಳನ್ನು ತೆಗೆಯಲು ಹೋಗುತ್ತಿದ್ದವನು ಅವರ ಶೂಗಳನ್ನು ಪಾಲಿಶ್ ಮಾಡುತ್ತಿದ್ದೆ. ಅಕ್ಷಯ ತೃತೀಯೆಯಂದು ಅವರು ನನಗೆ ಹೇಳಿದರು: ''ಮೃತ್ಯುಂಜಯಾನಂದರನ್ನು (ಅಸನ್‌ಸೋಲ್‌ನ ಅಧ್ಯಕ್ಷರೂ, ಮಹಾಪುರುಷ ಮಹಾರಾಜರ ಶಿಷ್ಯರೂ ಆಗಿದ್ದರು) ನೋಡಿ ಬರಲೆಂದು ಆಸ್ಪತ್ರೆಗೆ ಹೋಗಿದ್ದಾಗ ಅವರೊಂದು ಪುಸ್ತಕವನ್ನೋದುತ್ತಿದ್ದರು; ವಿಮಲ್ ಮಿತ್ರಾ ಬರೆದ 'ಕೊಡಿ ದಿಯೇ ಕೀನ್‌ಲಾಮ್' ('ಕಾಸು ಕೊಟ್ಟು ಕೊಂಡೆ'). ಅದರ ಬೆಲೆ ಮೂವತ್ತು ರೂಪಾಯಿಗಳು. ನಾನೇನಾದರೂ ಸ್ವಾಮೀಜಿಯವರ ಜೀವನವನ್ನು ಬರೆದರೆ ಜನರು ಅದನ್ನು ಓದುತ್ತಾರೇನು?'' ನಾನೆಂದೆ, ''ಹ್ಞೂಂ, ಏಕೆ ಓದುವುದಿಲ್ಲ? ಖಂಡಿತವಾಗಿಯೂ ಓದುತ್ತಾರೆ, ಮಹಾರಾಜ್. ನೀವು ಬರೆಯಲು ಪ್ರಾರಂಭಿಸಿ. ಮೊದಲೇ ಹೇಳಿದಂತೆ ಸ್ವಾಮೀಜಿಯವರ ಜೀವನದ ಅನೇಕ ವಾಸ್ತವಾಂಶಗಳನ್ನು ಗಾರ್ಗಿಯವರು ಹೊರತಂದಿದ್ದಾರೆ. ಮಾತ್ರವಲ್ಲ, ಪ್ರಮಥನಾಥ ಬಸು ಅವರ ಪುಸ್ತಕ ಹಳೆಯದಾಗಿಬಿಟ್ಟಿದೆ. 'ಅಪ್‌ಡೇಟೆಡ್ ಬಯಾಗ್ರಫಿ' ಬರೆಯುವುದು ಅಗತ್ಯ.''

ಅಂದಿನಿಂದ ಗಂಭೀರ ಮಹಾರಾಜರು 'ಯುಗನಾಯಕ ವಿವೇಕಾನಂದ' ಪುಸ್ತಕವನ್ನು ಬರೆಯತೊಡಗಿದರು. ಎರಡು ವರ್ಷದ ಅವಧಿಯಲ್ಲಿ ೨೦೦೦ ಪುಟಗಳನ್ನು ಬರೆದುಬಿಟ್ಟರು. ಅವರು ಬಹಳ ವೇಗವಾಗಿ ಬರೆಯಬಲ್ಲವರಾಗಿದ್ದರು. ನಾನಾಗ ಟ್ರೇನಿಂಗ್ ಸೆಂಟರ್‌ನಲ್ಲಿದ್ದು ಈ ಪುಸ್ತಕದ ಸಂಪಾದಕನಾಗಿದ್ದೆ. ಯಾವ ಮಾಹಿತಿಗಳನ್ನು ಅವರು ಪುಸ್ತಕದಲ್ಲಿ ಬರೆದಿರಲಿಲ್ಲವೊ ಅವುಗಳನ್ನೆಲ್ಲ ಅವರಿಗೆ ಸಂಗ್ರಹಿಸಿ ಕೊಡುತ್ತಿದ್ದೆ.

ಒಂದು ದಿನ ಹೇಳಿದೆ ''ಮೀರತ್‌ನಲ್ಲಿ ನಡೆದ ಘಟನೆಯನ್ನು ಬರೆದಿಲ್ಲ. ಹರಿ ಮಹಾರಾಜರ ಪತ್ರದಲ್ಲಿ ಇದರ ಉಲ್ಲೇಖವಿದೆ. ಸ್ವಾಮೀಜಿ ಒಂದು ದಿನ ಪುಲಾವ್ ತಯಾರಿಸಿ ತಮ್ಮ ಗುರುಭಾಯಿಗಳಿಗೆ ಉಣಿಸಿದರು. ತಮಗಾಗಿ ಒಂದಿಷ್ಟೂ ಉಳಿಸಿಕೊಳ್ಳಲಿಲ್ಲ. ಅವರು, 'ಸ್ವಾಮೀಜಿ, ನಿಮಗಾಗಿ ಸ್ವಲ್ಪವೂ ಇಟ್ಟುಕೊಳ್ಳಲಿಲ್ಲವೆ?' ಎಂದಾಗ ಅವರು ಉತ್ತರಿಸಿದರು, 'ನಾನು ಜೀವನದಲ್ಲಿ ಬಹಳಷ್ಟು ತಿಂದಿದ್ದೇನೆ. ನೀವು ತಿನ್ನಿ.' ಸ್ವಾಮೀಜಿಯವರು ಎಲ್ಲವನ್ನೂ ಬಡಿಸಿಬಿಟ್ಟರು. ತಮಗಾಗಿ ಚೂರೂ ಮಿಗಿಸಿಕೊಳ್ಳಲಿಲ್ಲ.'' ಹೀಗೆ ಚಿಕ್ಕ ಚಿಕ್ಕ ಘಟನೆಗಳನ್ನು ನೀಡತೊಡಗಿದರೆ ಸ್ವಾಮಿ ಗಂಭೀರಾನಂದಜಿ ಅವುಗಳನ್ನೆಲ್ಲ ಪುಸ್ತಕದಲ್ಲಿ ಸೇರಿಸುತ್ತಿದ್ದರು. ನಾನು ಒಂದು ದಿನ ಕೇಳಿದೆ, ''ಸ್ವಾಮೀಜಿ, ಅವುಗಳನ್ನು ಮಧ್ಯದಲ್ಲಿ ಅದು ಹೇಗೆ ಸೇರಿಸುತ್ತೀರಿ?'' ಅವರೆಂದರು. ''ಮಧ್ಯದಲ್ಲಿ ಸೇರಿಸುವುದನ್ನು ನಿಖಿಲಾನಂದರಿಂದ ಕಲಿತೆ. ನೋಡು, ಅವರು ಮಧ್ಯದಲ್ಲಿ ಸೇರಿಸಬೇಕಾದ ಅಂಶಗಳನ್ನು ಒಂದು ಬಿಳಿ ಕಾಗದದಲ್ಲಿ ಬರೆದಿಟ್ಟುಕೊಂಡು, ನಂತರ ಕಟ್ ಮಾಡಿದ ಜಾಗದಲ್ಲಿ ಪೇಸ್ಟ್ ಮಾಡುತ್ತಿದ್ದರು. ಪೂರ್ತಿ ಪುಟವನ್ನು ಮತ್ತೆ ಬರೆಯದಂತೆ ಇದನ್ನು ಕಲಿತಿದ್ದೇನೆ.''

*(ಮುಂದಿನ ಸಂಚಿಕೆಗೆ)*

## ಗುರುಮಹಿಮೆ

**ಬೆಟ್ಟ ಕರ್ಪೂರ ಉರಿದು । ಬೊಟ್ಟಿಡಲು ಬೂದಿಲ್ಲ**
**ನೆಟ್ಟನೆ ಗುರುವನರಿದನ । ಕರ್ಮವು**
**ಮುಟ್ಟಲಂಜುವವು ಸರ್ವಜ್ಞ ॥**

**ಹರ ತನ್ನೊಳಿರ್ದುದ ಗುರು ತೋರದಿರಲಹುದೆ ।**
**ಮರನೊಳಗ್ನಿ ಇರುತಿರ್ದು । ತನ್ನ ತಾ**
**ನುರಿವುದ ಕಂಡ? ಸರ್ವಜ್ಞ ॥**